*

**ಓಎಸ್ ನಂಃ 35/2016**
**ಪಿಡಬ್ಲೂಃ 2**

**<u>ಸಾಕ್ಷಿಗೆ ದಿನಾಂಕ 25.04-2026 ರಂದು ಕರೆಯಿಸಿ ಪ್ರಮಾಣ ವಚನ  ಬೋಧಿಸಲಾಯಿತು</u>**

**<u>ಮುಖ್ಯ ವಿಚಾರಣೆ ವಾದಿ ನಂಬರ್ 2(ಎ ಮತ್ತು ಬಿ) ಪರ ಶ್ರೀ.ಡಿಡಿ ವಕೀಲರಿಂದ</u>**

ನಾನು ನನ್ನ ಸಾಕ್ಷ್ಯವನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ವಿಷಯಗಳು ಸತ್ಯ ಮತ್ತು ನಿಜ ಇರುತ್ತದೆ ಆದ್ದರಿಂದ ಸದರಿ ನನ್ನ ಪ್ರಮಾಣ ಪತ್ರವನ್ನು ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಬೇಕಾಗಿ ಪ್ರಾರ್ಥಿಸುತ್ತೇನೆ. ನಾನು ಈ ಕೆಳಗಿನ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೇನೆ.

ಸರ್ವೆ ನಂಬರ್ 146*/1/5ನೇದ್ದರ 12 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-1ರಿಂದ 12 ಎಂದು, ಸರ್ವೆ ನಂಬರ್ 146*/1/1ನೇದ್ದರ 15 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-13 ರಿಂದ 27 ಎಂದು, ಸರ್ವೆ ನಂಬರ್ 149*/3/5ನೇದ್ದರ 13 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-28 ರಿಂದ 40 ಎಂದು, ಸರ್ವೆ ನಂಬರ್ 149*/3/7ನೇದ್ದರ 13 ಪಹಣಿ ಪತ್ರಿಕೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-41 ರಿಂದ 53 ಎಂದು, ಸರ್ವೆ ನಂಬರ್ 390/ಆ ನೇದ್ದರ  ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-54 ಎಂದು, MR ಸಂಖ್ಯೆ H102/2015-16ನೇದ್ದರ ನಕಲು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 55 ಎಂದು, ತಹಶೀಲ್ದಾರ್ ಚಿತ್ತಾಪುರ್ ಇವರಿಗೆ ಮೋನಯ್ಯ ಕಲಾಲ್ ಇವರು ನೀಡಿದ ಅರ್ಜಿಯ ನಕಲುಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 56 ಎಂದು, ನರ್ಸಮ್ಮ ಭೀಮಯ್ಯ ಇವರು ತಹಶೀಲ್ದಾರ್ ಚಿತ್ತಾಪುರ್ ಇವರ ಸಮಕ್ಷಮ  ನೀಡಿದ ಒಪ್ಪಿಗೆ ಪತ್ರದ ನಕಲುಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 57 ಎಂದು, ವಂಶಾವಳಿಯ ನಕಲುಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ- 58 ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ವಾದಿ ಸಂಖ್ಯೆ 2(ಎ ಮತ್ತು ಬಿ) ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.